

ಕಾದಂಬರಿಯಲ್ಲಿ ಬರುವ ಹಾರುವ ಓತಿಯೇ ಇದರ ಇಷ್ಟದ ಆಹಾರ. ಓತಿಕ್ಯಾತಗಳು ನೆಲದ ಮೇಲೆ ಚಲಿಸುವುದನ್ನು ಕಂಡರೆ ಆಕಾಶದಿಂದ ಹಾರಿ ಬಂದು ಫಕ್ಕನೆ ಹಿಡಿಯುತ್ತದೆ. ಮತ್ತೆ ಬಂದಷ್ಟೇ ವೇಗವಾಗಿ ಬೇಟೆ ಹಿಡಿದು ಚಕಚಕನೆ ಮರ ಹತ್ತಿ ಕಣ್ಮರೆಯೂ ಆಗಬಲ್ಲ ಐನಾತಿ ಇದು.

ಇದರ ವೇಗ ಮಾತ್ರ ಯಾವ ಹಾವಿಗೂ ಇದ್ದಂತಿಲ್ಲ. ಆಕರ್ಷಕ ವರ್ಣಗಳಿಂದ ಕೂಡಿದ ಈ ಹಾವಿನ ಬಾಲದ ವಿನ್ಯಾಸ ನನಗೆ ಬಲು ಇಷ್ಟವಾಯಿತು. ವಿನಯ ಜೊತೆ ಸೇರಿ ಎರಡು ವರ್ಷ ಇದನ್ನು ಹುಡುಕಿಕೊಂಡು ಎಲ್ಲೆಲ್ಲೋ ಓಡಾಡಿದ್ದಾಯಿತು. ಕೊನೆಗೆ ಕೊಲ್ಲೂರು ಬಳಿಯ ಆನೆಝರಿ ಚಿಟ್ಟೆ ಉದ್ಯಾನವನದಲ್ಲಿ ಕಂಡಿದೆ ಎಂದು ಅಝುರ್ ಎಂಬ ನ್ಯಾಚುರಲಿಸ್ಟ್ ಹೇಳಿದ್ದಕ್ಕೆ ಅಲ್ಲಿಗೂ ಹೋಗಿ ಬರಿಗೈಯಲ್ಲಿ ಬಂದೆವು. ಅಂತೂ ಕೊನೆಗೊಂದು ದಿನ ಮಲೆನಾಡಿನ ಕಾಡಿನಲ್ಲೇ ತನ್ನ ಸೊಬಗಿನ ದರ್ಶನವನ್ನು ಕೊಟ್ಟಿತು.

ವಿಶೇಷವೆಂದರೆ ಗಗನದಲ್ಲಿ ಹಾರುವಾಗ ಈ ಹಾವು ತನ್ನ ಮೈಯನ್ನು ಚಪ್ಪಟೆಯಾಗಿ ಹಿಗ್ಗಿಸಿಕೊಳ್ಳುತ್ತದೆ. ಎಸ್ ಆಕಾರದಲ್ಲಿ ಹಕ್ಕಿಯಂತೆ ತೇಲುತ್ತಾ ತೇಲುತ್ತಾ ಹಲವಾರು ಮೀಟರ್‌ಗಳ ತನಕ ಸುಲಲಿತವಾಗಿ ಇದು ಚಲಿಸುತ್ತದೆ. ಇದರ ತಳ ಬಾಗದ ದೇಹದ ಚರ್ಮ ಉಬ್ಬು ತಗ್ಗುಗಳಿಂದ ಕೂಡಿದ್ದು ಸರಸರ ಮರಹತ್ತಲು ಅದೂ ಕೂಡ ಸಖತ್ತು ಸಹಾಯ ಮಾಡುತ್ತದೆ. ಬಣ್ಣದ ಚಾಟಿಯಂತಿರುವ ಇದರ ಮೈಮೇಲಿನ ವಿನ್ಯಾಸ ಮಾತ್ರ ವೈವಿಧ್ಯಮಯ. ಬಟ್ಟೆಯ ಮೇಲೆ ವಿವಿಧ ಬಗೆಯ ಬಣ್ಣದ ಡಿಸೈನ್ ಗಳನ್ನು ಮಾಡುವ ಜನ ಈ ಬಣ್ಣದ ಹಾವು ಮತ್ತು ಬಣ್ಣದ ಹಕ್ಕಿಗಳ ಮೈಮಾಟದ ಕಲಾವಂತಿಕೆಯನ್ನು ಕದಿಯುತ್ತಾರೆ ಎಂಬ ಗುಮಾನಿ ನನಗಿದೆ. ಸೂಕ್ಷ್ಮವಾಗಿ ನೋಡಿದರೆ ಈ ಪ್ರಕೃತಿಗಿಂತ ಅದ್ಭುತ ಕಲಾವಿದ ಮತ್ತ್ಯಾರೂ ಇಲ್ಲವೇನೋ ಎನಿಸುತ್ತದೆ.

ಪ್ರಕೃತಿ ಪ್ರತಿಯೊಂದು ಜೀವಿಗೂ ಒಂದೊಂದು ಆಹಾರ ಕ್ರಮ ವಿಭಿನ್ನ ಜೀವನ ವಿಧಾನ ರೂಪಿಸಿಯೇ ಬದುಕಲು ಬಿಟ್ಟಿದೆ. ಮನುಷ್ಯ ಪ್ರಪಂಚದ ಆಚೆಗೆ ತಮ್ಮ ಬದುಕಿನ ಗುಟ್ಟುಗಳನ್ನು ಬಿಟ್ಟು ಕೊಡದೆ ತಣ್ಣಗೆ ಬದುಕುತ್ತಿರುವ ಈ ಜೀವರಾಶಿಗಳ ಒಳಹೊಕ್ಕು ನೋಡಿದಾಗ ಕಂಡಿದ್ದೆಲ್ಲವೂ ರೋಚಕಗಳೆ. ಇವುಗಳ ಹತ್ತಿರ ಹೋಗಿ ಇವುಗಳ ಖಾಸಗಿತನಕ್ಕೆ ಧಕ್ಕೆ ಮಾಡದೆ ಮಗ್ಧತೆಯ ಕಣ್ಣಿಂದ ಪಡುವ ಆನಂದ ಇದೆಯೆಲ್ಲ ಅದೇ ಈ ಕ್ಷಣಕ್ಕೆ ದೊಡ್ಡದು.

ಬಹುತೇಕ ಹಾವುಗಳು ವಿಷಕಾರಿಯಲ್ಲ. ಆದರೆ, ಉರಗಗಳ ಬಗ್ಗೆ ಇರುವಷ್ಟು ತಪ್ಪು ಕಲ್ಪನೆ ಕಟ್ಟುಕಥೆಗಳು ಬೇರೆ ಯಾವುದೇ ಜೀವಿಯ ಮೇಲೂ ಇಲ್ಲ. ಭೂಮಿ ಮೇಲೆ ಮೂರು ಸಾವಿರಕ್ಕೂ ಹೆಚ್ಚು ಪ್ರಭೇದದ ಸರ್ಪಗಳಿವೆ. ಆ ಪೈಕಿ ಕೆಲವೇ ಹಾವುಗಳಷ್ಟೇ ವಿಷಕಾರಿ. ಆದರೂ ಜನ ಹಾವು ಕಂಡರೆ ಮೊದಲು ಕೊಲ್ಲುವ ಬಡಿಗೆಗಳ ಹುಡುಕುತ್ತಾರೆ. ●